## ಮಕ್ಕಳಿಗಾಗಿ ನೊಬೆಲ್ ಪುರಸ್ಕೃತೆಯ ಕಥೆಗಳು




**ನೊಬೆಲ್** ಪ್ರಶಸ್ತಿ ಪುರಸ್ಕೃತ ಅಮೆರಿಕದ ಅರ್ಥಶಾಸ್ತ್ರಜ್ಞೆ ಎಸ್ಥರ್ ದುಫ್ಲೋ ಅವರು ಮಕ್ಕಳಿಗಾಗಿ ರಚಿಸಿರುವ ಕಿರುಪುಸ್ತಕಗಳ ಸರಣಿಯನ್ನು ಕನ್ನಡದ ಚಿಣ್ಣರಿಗಾಗಿ 'ಪ್ರಥಮ್ ಬುಕ್ಸ್' ಪ್ರಕಟಿಸಿದೆ. ಆರ್ಥಿಕ ವಿಕಾಸ ಮತ್ತು ಮೂಲಭೂತ ಅಧಿಕಾರಗಳನ್ನು ಪಡೆಯುವ ಬಗೆಗಿನ ಸಂಗತಿಗಳ ಈ ಸರಣಿಯ ಐದು ಪುಸ್ತಕಗಳು ಬಹು ಸುಂದರವಾಗಿ ಪ್ರಕಟಗೊಂಡಿವೆ; ಮಕ್ಕಳಿಗೆ ಅರಿವು ಮತ್ತು ರಂಜನೆ ನೀಡುವಂತಿವೆ.

'ಪ್ರತಿಯೊಂದು ಪುಸ್ತಕವೂ ಮಗು ತನ್ನ ಸುತ್ತಣ ಲೋಕವನ್ನು ಓದುವ, ಅರ್ಥ ಮಾಡಿಕೊಳ್ಳುವ ಹಾದಿಯಲ್ಲಿ ಇಟ್ಟ ಒಂದು ಹೆಜ್ಜೆ. ಅದಕ್ಕಿಂತ ಮುಖ್ಯವಾಗಿ- ಮಗು ಸಂತೋಷ, ಆತ್ಮವಿಶ್ವಾಸಗಳನ್ನು ಪಡೆದುಕೊಳ್ಳುವ ನಿಟ್ಟಿನಲ್ಲಿ ಇಡುವ ಇನ್ನೊಂದು ಹೆಜ್ಜೆಯೇ ಓದು' ಎನ್ನುವುದು ಎಸ್ಥರ್ ಅವರ ನಂಬುಗೆ. ಇದಕ್ಕೆ ತಕ್ಕಂತೆ ಇಲ್ಲಿನ ಕಥೆಗಳು ಎಳೆಯರಿಗೆ ಓದುವ ಸಂತಸವನ್ನು ನೀಡುವಂತಿರುವುದರ ಜೊತೆಗೆ, ಮನೋವಿಕಾಸದ ಸಾಧ್ಯತೆಗಳನ್ನೂ ಹೊಂದಿವೆ. ಫ್ರಾನ್ಸ್ ಮೂಲದ ಕಲಾವಿದರಾದ ಶಾಯೆನ್ ಒಲೀವ್ಹಿಯೆ ಅವರ ಸರಳ ಸುಂದರ ಚಿತ್ರಗಳು ಕಥೆಗಳ ಸಾಧ್ಯತೆಗಳು ಮಕ್ಕಳಿಗೆ ಸುಲಭವಾಗಿ ಸಂವಹನಗೊಳ್ಳಲು ಪೂರಕವಾಗಿವೆ.

ಕನ್ನಡದ ಹೆಸರಾಂತ ಲೇಖಕರು ಅನುವಾದಗಳನ್ನು ಮಾಡಿರುವುದು ಈ ಸರಣಿಯ ವಿಶೇಷ. 'ಊಲಾ: ಚುನಾವಣೆ ಸಮಯ' ಕಥನವನ್ನು ಹಿರಿಯ ಕಥೆಗಾರ ಎಸ್. ದಿವಾಕರ್ ಅನುವಾದಿಸಿದ್ದಾರೆ. ಪ್ರಸಿದ್ಧ ವಿಮರ್ಶಕರಾದ ಓ.ಎಲ್. ನಾಗಭೂಷಣಸ್ವಾಮಿ ಹಾಗೂ ಎಚ್.ಎಸ್. ರಾಘವೇಂದ್ರ ರಾವ್ ಅವರು ಕ್ರಮವಾಗಿ 'ನೆಸೊ ಮತ್ತು ನಾಜೆ: ದೊಡ್ಡ ಸಿಟಿಯ ಭಯವಿಲ್ಲ' ಮತ್ತು 'ಅಫಿಯಾ: ಅವಳನ್ನು ಗುಣಪಡಿಸುವವರು ಯಾರು?' ಕೃತಿಗಳನ್ನು ಕನ್ನಡಕ್ಕೆ ತಂದಿದ್ದಾರೆ. ಕವಿ ಎಲ್. ಸಿ. ನಾಗರಾಜ್ 'ಬಿಬಿರ್: ಮಾಟಗಾತಿಗೊಂದು ಪುಟ್ಟ ಸಹಾಯ' ಕೃತಿಯನ್ನು ಅನುವಾದಿಸಿದ್ದರೆ, 'ನೀಲೂ: ಇನ್ನು ಶಾಲೆ ತಪ್ಪಿಸುವುದಿಲ್ಲ' ಕಥೆಯನ್ನು ಜೆ.ವಿ. ಕಾರ್ಲೊ ಕನ್ನಡದಲ್ಲಿ ನಿರೂಪಿಸಿದ್ದಾರೆ.

**ಊಲಾ: ಚುನಾವಣೆ ಸಮಯ – ಕನ್ನಡಕ್ಕೆ: ಎಸ್. ದಿವಾಕರ್; ನೆಸೊ ಮತ್ತು ನಾಜೆ: ದೊಡ್ಡ ಸಿಟಿಯ ಭಯವಿಲ್ಲ – ಓ.ಎಲ್. ನಾಗಭೂಷಣಸ್ವಾಮಿ; ಅಫಿಯಾ: ಅವಳನ್ನು ಗುಣಪಡಿಸುವವರು ಯಾರು? – ಎಚ್.ಎಸ್. ರಾಘವೇಂದ್ರ ರಾವ್; ಬಿಬಿರ್: ಮಾಟಗಾತಿಗೊಂದು ಪುಟ್ಟ ಸಹಾಯ – ಎಲ್.ಸಿ. ನಾಗರಾಜ್; ನೀಲೂ: ಇನ್ನು ಶಾಲೆ ತಪ್ಪಿಸುವುದಿಲ್ಲ – ಜೆ.ವಿ. ಕಾರ್ಲೊ. ಪ್ರತಿ ಪುಸ್ತಕದ ಬೆಲೆ: ತಲಾ 100 ರೂಪಾಯಿ. ಪ್ರ: ಪ್ರಥಮ್ ಬುಕ್ಸ್, ಬೆಂಗಳೂರು. ಫೋನ್: 080-42052574. ವೆಬ್‌ಸೈಟ್: prathambooks.org**